ಆಕೆ ನಕ್ಕು, 'ನೀನು ಹೇಳಿದಂತೆ ಇರಲಿಲ್ಲವಾದರೂ ಸುಂದರವಾಗಂತೂ ಇತ್ತು' ಎಂದಳು. 'ಸುಂದರ ಎಂದರೆ ರಾಟೆ ಬಾವಿ, ಚಂದಮಾಮ, ಅನ್ನದ ತುತ್ತು...' ಎಂದೆ ನೆನಪಿಸುವವನಂತೆ.

'ಇಲ್ಲ, ನಾನು ಓದಿಕೊಂಡ ಪುಸ್ತಕದಲ್ಲಿ ರಾಟೆ ಬಾವಿ ಇರಲಿಲ್ಲ. ಬರೀ ಅಮ್ಮನ ಕಂಕುಳಲ್ಲಿ ಮಗು, ಹಾಲು ಬೆಳದಿಂಗಳು, ಎದುರಿಗೆ ಚಂದಮಾಮ. ಚಂದಿರನ ಕಡೆ ತೋರಿಸುತ್ತಿರುವ ಅಮ್ಮನ ಬಲಗೈ ಬೆರಳು.' ನನಗೆ ಸಂಶಯ ಬಂತು.

'ನೀನು ಓದಿದ್ದು ಸರ್ಕಾರಿ ಶಾಲೆನಾ? ಖಾಸಗಿ ಶಾಲೆನಾ?' ಕೇಳಿದೆ.

ಅಷ್ಟು ಹೊತ್ತಿನವರೆಗೂ ಮಂಚದ ಮೇಲೆ ಕುಳಿತು ತಲೆಗೆ ಕೊಬ್ಬರಿ ಎಣ್ಣೆ ಹಚ್ಚಿಕೊಳ್ಳುತ್ತಾ ಮಾತನಾಡುತ್ತಿದ್ದ ಆಕೆ ಇದ್ದಕ್ಕಿದ್ದಂತೆ ಏನೋ ನೆನಪಾದವಳಂತೆ ಎದ್ದಳು. ಎಣ್ಣೆ ಡಬ್ಬಿಯನ್ನು ಗೂಡಲ್ಲಿಟ್ಟು ಸಿಂಕ್‌ನಲ್ಲಿ ಕೈತೊಳೆದುಕೊಂಡಳು. ಅಲ್ಲಿಂದ ನೇರವಾಗಿ ಅಡುಗೆ ಮನೆಗೆ ಹೋಗಿ ಒಂದು ಪ್ಲೇಟ್‌ನಲ್ಲಿ ಪುಂಡಿಪಲ್ಲೆಯ ಕಟ್ಟುಗಳನ್ನು ತಂದುಕೊಂಡು ಡೈನಿಂಗ್ ಟೇಬಲ್ ಹತ್ತಿರ ಕೂತುಕೊಂಡಳು. ಪುಂಡಿಪಲ್ಲೆಯ ಎಲೆಗಳನ್ನು ಸೋಸುತ್ತಾ 'ಸರ್ಕಾರಿ ಶಾಲೆಯಲ್ಲಿ ಓದಬೇಕಾದ ಕರ್ಮ ನನಗಿಲ್ಲ... ನಮ್ಮಪ್ಪ ಯಾವಾಗಲೂ ನನ್ನನ್ನ ಖಾಸಗಿ ಶಾಲೆಯಲ್ಲಿ ಓದಿಸಿದ್ದಾರೆ ಗೊತ್ತಾ?' ಎಂದಳು ಸರ್ಕಾರಿ ಶಾಲೆಯನ್ನು ಅವಮಾನಿಸುತ್ತಾ.

ನಾನು ಓದಿದ್ದು ಕೂಡ ಒಂದು ಚಿಕ್ಕ ಖಾಸಗಿ ಶಾಲೆಯಲ್ಲಿಯೇ. ಆದರೆ ನನಗೆ ಸರ್ಕಾರಿ ಶಾಲೆಗಳ ಮೇಲೆ ಯಾವುದೇ ರೀತಿಯ ಕೀಳರಿಮೆ ಇಲ್ಲ. ಆದರೆ ನಾನು ಓದಿದ ವರ್ಣಮಾಲೆ ಪುಸ್ತಕಕ್ಕೂ ಆಕೆ ಓದಿದ ಪುಸ್ತಕಕ್ಕೂ ಏಕೆ ವ್ಯತ್ಯಾಸವಿದೆಯೋ ಅರ್ಥವಾಗಲಿಲ್ಲ.

ನನ್ನ ಹೆಂಡತಿಯೇ ಹೇಳಿದಳು. 'ದೇಶದಲ್ಲಿ ಒಂದೇ ಥರದ ವರ್ಣಮಾಲೆ ಪುಸ್ತಕ ಹೇಗಿರಲು ಸಾಧ್ಯ? ಬೇರೆ ಬೇರೆ ಶಾಲೆಗಳಲ್ಲಿ ಬೇರೆ ಬೇರೆ ಪುಸ್ತಕಗಳಿರಬಹುದಲ್ಲ?'

'ಎಷ್ಟೇ ವರ್ಣಮಾಲೆ ಪುಸ್ತಕಗಳನ್ನು ಪ್ರಕಟಿಸಿದರೂ 'ಅ'ಅಂದರೆ ಅಮ್ಮನ ಚಿತ್ರಗಳನ್ನೇ ಹಾಕ್ತಾರೆ' ಎಂದೆ.

'ಹೌದು 'ಅಮ್ಮ' ಎಂಬ ಪದಕ್ಕೆ ಅಮ್ಮ ಎನ್ನುವ ರೂಪಕ್ಕೆ ಮಕ್ಕಳನ್ನು ಆಕರ್ಷಿಸುವ ಶಕ್ತಿ ಇದೆ. ಓದು ಕೂಡಾ ಅಮ್ಮನ ಥರವೇ ಎಂದು ಮಕ್ಕಳಿಗೆ ಗೊತ್ತಾಗಲೆಂದು 'ಅ' ಅಕ್ಷರಕ್ಕೆ ಅಮ್ಮನ ಚಿತ್ರವನ್ನು ಗಂಟು ಹಾಕಿರುತ್ತಾರೆ ನಮ್ಮ ಹಿರಿಯರು' ಎಂದಳು ನನ್ನಾಕೆ.

ನೋಡಲು ಹಾಗೆನ್ನೆಸುವುದಿಲ್ಲ. ನನ್ನಾಕೆಯ ಮನಸಿನಲ್ಲಿ ಸಾಕಷ್ಟು ತರ್ಕ ಇರುತ್ತದೆ. ಓದಿದ್ದು ಪಿ.ಯು.ಸಿ.ಯಾದರೂ ಊರಿನ ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಟ್ಟ ಬುದ್ಧಿವಂತಿಕೆ ಇದೆ. ಆಕೆಯಲ್ಲಿ ಆ ಅನುಭವದ ತರ್ಕವಂತೂ ಖಂಡಿತಾ ಬಂದಿರುತ್ತದೆ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾ 'ಎಷ್ಟು ಒಳ್ಳೆಯ ಕಲ್ಪನೆ. ಪ್ರಾಥಮಿಕ ಅಕ್ಷರಭ್ಯಾಸವನ್ನು ಅಮ್ಮನೊಂದಿಗೆ ಶುರು ಮಾಡಿದ ಹಿರಿಯರಿಗೆ ನಮನ. ನಾಡಿನ ಅದ್ಭುತ ಕಲಾವಿದರಾದ ಬಾಪು ಹೀಗೇಕೆ ಮಾಡಿದರು?' ಎಂದೆ.

'ಆ ಪುಸ್ತಕ ತಂದರೆ ತಾನೇ ನನಗೆ ಅರ್ಥ ಆಗೋದು' ಎಂದಳು ನನ್ನ ಹೆಂಡತಿ.

'ಈಗ ನಿನಗೆ ತೋರಿಸಲು ಆ ಪುಸ್ತಕ ಕೊಳ್ಳಬೇಕಾ?' ಎಂದೆ ವ್ಯಂಗ್ಯವಾಗಿ

ಪುಂಡಿಪಲ್ಲೆ ಸೋಸುವುದು ಪೂರ್ತಿಯಾಗಿರಬೇಕು. ನನ್ನ ಹೆಂಡತಿ ಅದನ್ನು ತೆಗೆದುಕೊಂಡು ಅಡುಗೆ ಮನೆಗೆ ನುಗ್ಗಿದಳು. ನಾನು ಒಂದು ಕುರ್ಚಿ ಹಾಕಿಕೊಂಡು ಅಟ್ಟದ ಮೇಲಿದ್ದ ಹಳೆಯ ಪುಸ್ತಕಗಳನ್ನು ಜಾಲಾಡಿ ಓದಿನಬಾಬು ಕೊಟ್ಟಿದ್ದ ವರ್ಣಮಾಲೆ ಪುಸ್ತಕ ಹೊರ ತೆಗೆದು ಮತ್ತೊಮ್ಮೆ ಕಣ್ತುಂಬಾ... ನನ್ನ ಚಿಕ್ಕಂದಿನ ಅಮ್ಮನ ಚಿತ್ರವನ್ನು ನೋಡಿಕೊಂಡೆ.